<u>ಸಾಕ್ಷಿಯನ್ನು ದಿಃ 29-11-2016 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>
<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಡಿ ಎಂ ಎನ್ ವಕೀಲರಿಂದ ವಾದಿಯ ಪರವಾಗಿ</u>

(ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ಕೇಸನಲ್ಲಿ ಸಲ್ಲಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ)

ನಾನು ವಾದಿಯು ನನ್ನ ಹೆಸರಿಗೆ ಬರೆದುಕೊಟ್ಟಿರುವ ವಿಶೇಷ ಮೊಕ್ತಿಯಾರ ಪತ್ರವನ್ನು ಹಾಜರ ಪಡಿಸಿದ್ದು ಅದನ್ನು <u>**ನಿಪಿ 1**</u> ಅಂತಾ ಗುರುತಿಸಲಾಯಿತು. ದಾವಾ ಆಸ್ತಿಯ ಸಿ ಟಿ ಎಸ್ ಉತಾರ ಮತ್ತು ನಕ್ಷೆಯ ಧೃಡೀಕೃತ ನಕಲುಗಳನ್ನು ಹಾಜರ ಮಾಡಿದ್ದು ಅವುಗಳನ್ನು <u>**ನಿಪಿ 2**</u> ಮತ್ತು <u>**ನಿಪಿ 3**</u> ಅಂತಾ ಗುರುತಿಸಲಾಯಿತು. ಅಫಸಾತ್ ವಾಟ್ನಿ ಪತ್ರದ ನೋಟರೈಸ್ಡ್ ಪ್ರತಿಯನ್ನು ಹಾಜರ ಮಾಡಿದ್ದು ಅದನ್ನು ಶ್ರೀ ಎಂ ಎ ಪಿ ವಕೀಲರು ಅದನ್ನು ಗುರುತಿಸುವ ಸಲುವಾಗಿ ತಮ್ಮ ತಕರಾರನ್ನು ವ್ಯಕ್ತಪಡಿಸುತ್ತಾರೆ. ಅಫಸಾತ್ ವಾಟ್ನಿ ಪತ್ರದ ಮೂಲ ದಾಖಲೆಯ ಈ ಕೇಸ್‌ನಲ್ಲಿ ವಾದಿಯು ಹಾಜರ ಪಡಿಸದೇ ಮತ್ತು ಅದನ್ನು ಹಾಜರ ಪಡಿಸುವ ಸಲುವಾಗಿ ಯಾವುದೇ ಕಾರಣಗಳನ್ನು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರದೇ ಇರುವುದರಿಂದ ಅದನ್ನು ಗುರುತಿಸಿರುವುದಿಲ್ಲ. ವಾದಿಯ ಹೆಂಡತಿಯ ಸಹೋದರಿಯಾದ ಗಂಗೂಬಾಯಿಯವರ ಮರಣ ಪ್ರಮಾಣ ಪತ್ರದ ನೋಟರೈಸ್ಡ್ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು <u>**ನಿಪಿ 4**</u> ಅಂತಾ ಗುರುತಿಸಲಾಯಿತು. ವಾದಿಯ ಮಗನಾದ ಲಕ್ಷ್ಮಣ ಪೂಜಾರಿಯ ಮರಣ ಪ್ರಮಾಣ ಪತ್ರವನ್ನು ಹಾಜರ ಪಡಿಸಿದ್ದು ಅದನ್ನು <u>**ನಿಪಿ 5**</u> ಅಂತಾ ಗುರುತಿಸಲಾಯಿತು. ದಾವಾ ಆಸ್ತಿಯ ಕುರಿತು ಯಾವುದೇ ವ್ಯವಹಾರವನ್ನು ಮಾಡಬಾರದು ಅಂತಾ ವಾದಿ

ದಿನಪತ್ರಿಕೆಯಲ್ಲಿ ಕೊಟ್ಟಿರುವ ಸಾರ್ವಜನಿಕ ಪ್ರಕಟಣೆಯನ್ನು ಹಾಜರಪಡಿಸಿದ್ದು ಅದನ್ನು **ನಿಪಿ 6** ಅಂತಾ ಗುರುತಿಸಲಾಯಿತು. ವಾದಿಗೆ ಸಂಬಂಧಿಸಿದ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದನ್ನು **ನಿಪಿ 7** ಅಂತಾ ಗುರುತಿಸಲಾಯಿತು. ದಿಃ 12-03-2014 ರ ಖರೀದಿ ಪತ್ರದ ಧೃಡೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು **ನಿಪಿ 8** ಅಂತಾ ಗುರುತಿಸಲಾಯಿತು. ವಾದಿಯ ಹೆಂಡತಿಯಾದ ಸುಮಿತ್ರಾಬಾಯಿ ತೀರಿಕೊಂಡ ಬಗ್ಗೆ ತೋರಿಸಲು ಮರಣ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದನ್ನು **ನಿಪಿ 9** ಅಂತಾ ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕು ಅಂತಾ ಮಾನ್ಯ ನ್ಯಾಯಾಲಯದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಶ್ರೀ ಎಂ ಎ ಪಿ / ವಾಯ್ ಆರ್ ಜಿ ವಕೀಲರಿಂದ ಪ್ರತಿವಾದಿಯರ ಪರವಾಗಿ

ಶ್ರೀ ಎಂ ಎ ಪಿ / ವಾಯ್ ಆರ್ ಜಿ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸರಿ ಇದೆ

ಸಹಿ/- 29-11-2016

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ